*ಏರ್‌ಫೋರ್ಸ್ ಕುಮಾರ, ಹೆಡತಲೆ*
*ಸಿಹಿಮುತ್ತು ಎಂದರೇನು? ಸಕ್ಕರೆ ಖಾಯಿಲೆಯವರಿಗೆ ಇದನ್ನು ಕೊಡಬಹುದೇ ಕಮ್ಯಾಂಡರ್?*



ಮುತ್ತು+ಮಮತೆ–ಕಾಮ = ಸಿಹಿಮುತ್ತು; ಸಕ್ಕರೆಯ ಬದಲು ಅಕ್ಕರೆ ಇರುವುದರಿಂದ ಯಾರಿಗೆ ಬೇಕಾದರೂ ಕೊಡಬಹುದು ಡಿಮ್ಯಾಂಡರ್.

*ಕೆ.ವಿ.ಶಿವಕುಮಾರ್, ಮೈಸೂರು*
*ಅಂತರಂಗದ ದುಗುಡವನ್ನು ಹೊರಹಾಕಲು ಇರುವ ಸುಲಭೋಪಾಯ ಏನು ಸಾರ್?*
ಇತರರ ಇನ್ನೂ ದೊಡ್ಡ ದುಗುಡವನ್ನು ಕೇಳಿಸಿಕೊಂಡುಬಿಟ್ಟರಾಯ್ತು.

*ಎಂ.ಬಿ.ಖೋದಾನಪುರ, ಸವದತ್ತಿ*
*ನೀತಿವಂತ ಗಂಡನಿಗೆ ಚಾರಿತ್ರ್ಯಹೀನ ಹೆಂಡತಿ ದೊರಕಿದರೆ?*
ಜಗಕ್ಕೆ ಮತ್ತೊಬ್ಬ ಭರ್ತೃಹರಿಯಂತಹ ಶ್ರೇಷ್ಠ ಕವಿ ದೊರಕುತ್ತಾನೆ.

*ಆರ್.ವಿಜಯಲಕ್ಷ್ಮಿ, ಕೊಳ್ಳೇಗಾಲ*
*ಬುದ್ಧಿಗೆ ಗೆದ್ದಲು ಹಿಡಿದರೆ?*
ಗೆದ್ದಲು ಹುಳಗಳ ಬುದ್ಧಿ ಹೆಚ್ಚಾಗುತ್ತದಂತೆ!

*ವಿದ್ಯಾ ಎನ್. ಪೈ. ಹೊನ್ನಾವರ*
*ದೇವರು ಹತ್ತವತಾರ ಎತ್ತಿದ್ದು ಏಕೆ?*




ಗಾಡ್ಸ್ ಟಾಪ್ ಟೆನ್ ಕಾರ್ಯಕ್ರಮದ ಅಂಗವಾಗಿ ಎಂದನೊಬ್ಬ ಟೀವಿಗ.

*ಜಾಕೋಬ್ ಡಿಸೋಜ, ಕುರುವಳ್ಳಿ*
*ಮನುಷ್ಯ ಸತ್ತಮೇಲೆ ಏನೂ ಒಯ್ಯುವುದಿಲ್ಲವೆಂದು ತಿಳಿದರೂ ಇದ್ದಾಗ ಈ ಕಲಹವೇಕೆ?*
ಸತ್ತಮೇಲಿನ ಮಾತು ಅಂತಿರಲಿ, ಇದ್ದಾಗಲೂ ಸತ್ತಂತಿರದಿರಲು ಈ ಹಪಾಹಪಿ.

*ಗೌರಿ ಶೇಷಾದ್ರಿ, ಉತ್ತನಹಳ್ಳಿ*
*ಸಂಬಂಧಗಳು ಮುರಿದುಬೀಳಲು ಪ್ರೀತಿ, ಅಧಿಕಾರ, ಹಣ ಇವುಗಳಲ್ಲಿ ಯಾವುದು ಕಾರಣ ಸರ್?*
ಅಧಿಕಾರ, ಹಣಗಳಿಂದ ಉಂಟಾದ ಅಹಂಕಾರ, ಅಂತಸ್ತಿನ ಭ್ರಮೆ.

*ಸಿ.ಎಸ್. ರಾಜಣ್ಣ, ಬಾದಾಮಿ*
*ನಾವು ನಮ್ಮ ಉಸಿರು ಉಸಿರಿಗೂ ತೆರಿಗೆ ಕೊಡುವಂತಿದ್ದರೆ..?*
ಕಪ್ಪುಹಣದಂತೆ ಕಪ್ಪು ಉಸಿರು ಎಂಬ ಕಳ್ಳ ಅಕೌಂಟ್ ಶುರುವಾಗುತ್ತಿತ್ತು.

*ಎನ್.ಆರ್.ದೇಸಾಯಿ, ರಾಯಚೂರು*
*ವಿಧಾನಸೌಧದ ಪಕ್ಕದಲ್ಲಿಯೇ ಒಂದು ರೆಸಾರ್ಟ್ ಕಟ್ಟಬಹುದಲ್ಲ?*
ಪಶ್ಚಿಮಕ್ಕೆ ತಗ್ಗು ಇರುವುದರಿಂದ ವಾಸ್ತು ಪ್ರಕಾರ ಆಗಿಬರುವುದಿಲ್ಲವಂತೆ!

*ಡಿ.ಎಲ್.ನಾಗರಾಜ್, ಚನ್ನಗಿರಿ*
*ಅಂದು ಅಧಿಕಾರ ತ್ಯಜಿಸಿ ವನವಾಸ ಮಾಡಿದವರಿಗೂ, ಇಂದು ಅಧಿಕಾರಕ್ಕಾಗಿ ರೆಸಾರ್ಟ್‌ವಾಸ ಮಾಡುವವರಿಗೂ ಏನು ವ್ಯತ್ಯಾಸ?*
ಅವರ ರಾಮಾಯಣ ಪೂಜ್ಯ; ಇವರ ರಾಮಾಯಣ ವರ್ಜ್ಯ.

*ನಾರಾಯಣ, ಗುಗ್ಗರಹಟ್ಟಿ*
*ಸಹಗಮನ ಪದ್ಧತಿಯನ್ನು ಕಡ್ಡಾಯವಾಗಿ ಜಾರಿಗೆ ತಂದರೆ ಜನಸಂಖ್ಯೆ ಕಡಿಮೆಯಾಗಬಹುದಾ ಸಾರ್?*
ಹುಚ್ಚಪ್ಪ. ಇಲ್ಲಿ ಇರಬೇಕಾದುದು ನಿಯಂತ್ರಣ, ಕೊಲೆಯಲ್ಲ!

*ಪದ್ಮಜಾ ಸುಂದರೇಶ್, ಮೈಸೂರು*
*ಮಠಾಧೀಶರ ಕೈಗೆ ಆಡಳಿತದ ಚುಕ್ಕಾಣಿ ಸಿಕ್ಕರೆ ಹೇಗಿರಬಹುದು?*
ಸೂಕ್ತ ಮಠಾಧೀಶರಾದರೆ ಮಟ್ಟ ಮಟ್ಟವಾಗಿ ಬೆಳವಣಿಗೆ, ಸೂಕ್ತವಲ್ಲದಿರೆ ಮಟಾಷ್!

*ಕುಮಾರ ಚಲವಾದಿ, ಹೊಳೆನರಸಿಪುರ*
*ಹೆಣ್ಣು, ಹೊನ್ನು, ಮಣ್ಣು ಇವುಗಳಲ್ಲಿ ಪ್ರಬಲವಾದದ್ದು ಯಾವುದು?*
ಮಣ್ಣೇ. ಇನ್ನೆರಡೂ ಇಂದಲ್ಲ ನಾಳೆ ಅದನ್ನೇ ಸೇರುವುದು!

*ಬೆಳ್ಳಾವೆ ರಮೇಶ್, ಬೆಂಗಳೂರು*
*ಇರಲೊಂದು ಸೂರು, ಅಲ್ಲೊಂದು ಕಾರು, ಇರದಿದ್ದರೆ ಬೋರು, ಅಲ್ಲವೇ ಸಾರು?*
ಸೂರಿಗೊಂದು ಸಾಲ, ಕಾರಿಗೂ ಕೈಸಾಲ, ಸಾಲ ಜಾಲದಿಂದ ಬಾಳ ಪಥವೆ ಜಾಳು ಜಾಳಾ?

## ಬಹುಮಾನಿತ ಪ್ರಶ್ನೆ

*ಮೈಸೂರು ಕುಸುಮ, ಮೈಸೂರು*
*ಮಕ್ಕಳು ಮಾಡುವ ಹಠದ ಮುಂದೆ ನಾವು ಕಲಿತ ವಿದ್ಯೆಗಳೆಲ್ಲಾ ಗೋತಾ ಹೊಡೆಯುತ್ತವಲ್ಲಾ...?*
ಅದೇ ಚೆನ್ನ. ರಮಿಸುವ ಭರದಲ್ಲಿ ಪರಸ್ಪರ ಆತ್ಮೀಯತೆ, ಪ್ರೀತಿ ಹೆಚ್ಚುತ್ತದೆ.

*ಬಿ.ಎಂ.ಪರಶಿವಮೂರ್ತಿ, ನಾಗರಬಾವಿ*
*ನನ್ನ ಹೆಂಡತಿಗಿಂತಲೂ ಬೇರೆಯವರ ಹೆಂಡತಿಯರೇ ಸುಂದರವಾಗಿ ಕಾಣಿಸುತ್ತಾರಲ್ಲಾ?*
ಆಹಾ! ಸ್ವಾಮಿ, ನೀವು ಪರಶಿವರೋ, ಪರ(ಸ್ತ್ರೀ)ವಶರೋ?

*ಎಂ.ಜೆ.ಆರ್.ಶೇಖರ್, ದೊಡ್ಡಬಳ್ಳಾಪುರ*
*ನಗುವೇ ಆರೋಗ್ಯದ ಮೂಲವಯ್ಯ ಎಂದು ಬಸವಣ್ಣನವರು ಹೇಳದಿದ್ದರೂ ಈ ಅಂಕಣ ನಗಿಸಿ, ಆರೋಗ್ಯ ಉಳಿಸಿ, ಓದುಗರನ್ನು ಬೆಳೆಸುತ್ತಿದೆಯಲ್ಲವೇ?*
ಅದರ ಶ್ರೇಯ ಸಲ್ಲಬೇಕಾದ್ದು ಪ್ರಶ್ನೆ ಕೇಳುವ, ಕೊಂಡು ಓದುವ ಸಹೃದಯ ಭಾವ ಮತ್ತು ಹಾಸ್ಯ ರಸಿಕರಿಗೆ ಶೇಖರ್.

*ಡಿ.ಎಸ್.ಪಂಕಸುಬ್ರಮಣ್ಯ, ಬೆಂಗಳೂರು*
*ಮೊಬೈಲ್‌ನಲ್ಲಿ ಮಾತನಾಡುವಾಗ ಓಡಾಡುವುದೇಕೆ?*



ಫೋನ್ ಮೊಬೈಲ್ ಅಲ್ಲವೇ, ಅದಕ್ಕೇ ಮಾತನಾಡುವವರೂ ಮೊಬೈಲ್!

*ಎಂ.ಜೆ.ಆರ್.ಶೇಖರ್, ದೊಡ್ಡಬಳ್ಳಾಪುರ*
*ಅಕಸ್ಮಾತ್ ದೇವರು ಈಗ ಭೂಮಿಗಿಳಿದು ಬಂದರೆ ಏನಾಗಬಹುದು?*
ವೀಸಾ ಇಲ್ಲದೆ ಬಂದನೆಂದು ಅರೆಸ್ಟ್ ಆಗಬಹುದು!

*ಮಲ್ಲಿಕಾರ್ಜುನ ಬಗಲಿ, ಗಿರಗಾಂವ*
*ಎಲ್ಲಾ ಮೊಬೈಲ್ ಟವರ್‌ಗಳನ್ನೂ ದಿಢೀರನೆ ಬಂದ್ ಮಾಡಿದರೆ?*
ವಾಹ್! ಒಳ್ಳೆಯ ಯೋಚನೆ. ಸ್ವಲ್ಪ ಕಾಲವಾದರೂ ವಿಶ್ವದಲ್ಲಿ ಶಾಂತಿ ನೆಲೆಸುತ್ತದೆ.

■ ರಾಮ್